ನ್ಯಾಯ ಬೆಲೆ ಅಂಗಡಿಯಲ್ಲಿ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳ ಗುಣಮಟ್ಟ

ಚುಕ್ಕೆ ಗುರುತಿನ ಸಂಖ್ಯೆ 56 : (32)

ಸದಸ್ಯರ ಹೆಸರು : ಶ್ರೀ ರೋಷನ್ ಬೇಗ್. ಆರ್.(ಶಿವಾಜಿನಗರ)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ತೂಕ ಮತ್ತು ಅಳತೆ ಇಲಾಖೆಯ ಕಾರ್ಯವೈಖರಿಯ ವಿವರ ನೀಡುವುದು.

ಉತ್ತರ

ಕಾನೂನು ಮಾಪನಶಾಸ್ತ್ರ ಲಾಖೆಯು ತೂಕ ಮತ್ತು ಅಳತೆಗಳಲ್ಲಿ ನಿಖರತೆಯನ್ನು ಕಾಪಾಡುವ. ಆಟೋ ದರ ಮೀಟರ್‌ಗಳು ನಿಗದಿತ ದೂರಕ್ಕೆ ಸರಿಯಾದ ದರವನ್ನು ನೊಂದಾಯಿಸುವಂತೆಯೂ ಹಾಗೂ ಪೊಟ್ಟಣ ಸಾಮಾಗ್ರಿಗಳನ್ನು ಮುದ್ರಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ಕ್ರಮವಹಿಸುವುದು ಈ ಇಲಾಖೆಯ ಮುಖ್ಯ ಕಾರ್ಯ ವೈಖರಿಯಾಗಿರುತ್ತದೆ.

ಕ್ರ.ಸಂ. ಪ್ರಶ್ನೆ

ಆ) ಇಲಾಖೆಯ ತೂಕ ಮತ್ತು ಅಳತೆಯನ್ನು ಉಲ್ಲಂಘಿಸಿದವರ ಮೇಲೆ ದೂರು ದಾಖಲಿಸಿದೆಯೇ.

ಉತ್ತರ

ಹೌದು

ಕ್ರ.ಸಂ. ಪ್ರಶ್ನೆ

ಇ) ಹಾಗಿದ್ದಲ್ಲಿ. ಕಳೆದ 3 ವರ್ಷಗಳಲ್ಲಿ ಎಷ್ಟು ದೂರುಗಳನ್ನು ದಾಖಲಿಸಿ ಕೊಳ್ಳಲಾಗಿದೆ.

ಉತ್ತರ

ಕಳೆದ 3 ವರ್ಷಗಳಲ್ಲಿ ತೂಕ ಮತ್ತು ಅಳತೆ ಕಾನೂನು/ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ದ ಈ ಕೆಳಕಂಡಂತೆ ಮೊಕದೊಮ್ಮೆಗಳನ್ನು ದಾಖಲಿಸಲಾಗಿದೆ.

2005–06	33.225
2006–07	37.811
2007–08	43.467

ಕ್ರ.ಸಂ. ಪ್ರಶ್ನೆ

ಈ) ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

ಉತ್ತರ

ತೂಕ ಮತ್ತು ಅಳತೆ ಕಾನೂನು ಮತ್ತು ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ದ ಮೊಕದ್ದಮ್ಮೆಗಳನ್ನು ದಾಖಲಿಸಿ. ಅವುಗಳನ್ನು ಅಭಿಸಂಧಾನ ನಡವಳಿ ಮೂಲಕ ರಾಜಿ ಸಂಧಾನಮಾಡಿ ದಂಡ ದಾಖಲಿಸಿ ಕ್ರಮ ಜರುಗಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಅಭಿಸಂಧಾನವಾದ ಮೊಕದ್ದಮೆಗಳು. ವಸೂಲು ಮಾಡಲಾದ ಅಭಿಸಂಧಾನ ದಂಡ ಹಾಗೂ ನ್ಯಾಯಾಲಯದಲ್ಲಿ ದಾಖಲಿಸಲಾದ ಮೊಕದ್ದಮ್ಮೆ ಹಾಗೂ ವಸೂಲಾದ ದಂಡ ಈ ಕೆಳಕಂಡಂತಿದೆ.

ವರ್ಷ	ಅಭಿಸಂಧಾನವಾದ ಮೊಕದ್ದಮ್ಮೆಗಳು	ಅಭಿಸಂಧಾನ ದಂಡ	ನ್ಯಾಯಲಯದಲ್ಲಿ ದಾಖಲಿಸಿದ ಮೊಕದ್ದಮ್ಮೆಗಳು	ನ್ಯಾಯಾಲಯದಲ್ಲಿ ವಿಧಿಸಿದ ದಂಡ
05–06	32.244	2.51.53.786	233	1.92.100
06–08	37.312	3.0875.755	284	3.24.550
07–08	42.986	4.34.57.336	219	4.00.380

ಕ್ರಸಂ.	ಪ್ರಶ್ನೆ
ಉ)	ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರದಾರರಿಗೆ ಗುಣಮಟ್ಟವಲ್ಲದ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ.

ಉತ್ತರ

–ಇಲ್ಲ–

ಕ್ರಸಂ.	ಪ್ರಶ್ನೆ
ಊ)	ಹಾಗಿದ್ದಲ್ಲಿ. ಗುಣಮಟ್ಟದಲ್ಲದ ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ನ್ಯಾಯಬೆಲೆ ಅಂಗಡಿಗಳ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ (ವಿವರ ನೀಡುವುದು)

ಉತ್ತರ

–ಉದ್ಭವಿಸುವುದಿಲ್ಲ–

ಶ್ರೀ ಆರ್.ರೋಷನ್ ಬೇಗ್ ;– ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ತೂಕ ಮತ್ತು ಅಳತೆ ಇಲಾಖೆಗೆ ಒಂದು ದೊಡ್ಡ ಬೀಗವನ್ನು ಹಾಕಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ. ಇದು ಏನು ಕೆಲಸ ಮಾಡುತ್ತಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇಷ್ಟು–ಅಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದೇವೆಂದು ವರದಿ ಪ್ರಕಾರ ಹೇಳಿದ್ದೀರಿ. ಇವತ್ತಿನ ದಿವಸ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳನ್ನು ಬಿಟ್ಟು ಕೇವಲ ಬೆಂಗಳೂರು ನಗರದಲ್ಲಿರತಕ್ಕಂಥ ಆಟೊ ಮೀಟರ್ಸ್, ಟ್ಯಾಕ್ಸಿ ಮೀಟರ್ಸ್ ಮತ್ತು ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್‌ನ್ನು ಮೆಷರ್ ಮಾಡುವುದನ್ನು ನೋಡಿದರೆ ಗೊತ್ತಾಗುತ್ತದೆ. ಇವತ್ತಿನ ದಿವಸ ಯಾವುದೇ ಪೆಟ್ರೋಲ್ ಬಂಕ್‌ನಲ್ಲಿಯೂ ಕೂಡ ಪೆಟ್ರೋಲ್‌ನ್ನು ಸರಿಯಾಗಿ ಮೆಷರ್ ಮಾಡುವುದಿಲ್ಲ. ಆದ್ದರಿಂದ. ನಿಮ್ಮ ಇಲಾಖೆಯವರು ಎಷ್ಟು ಪೆಟ್ರೋಲ್ ಬಂಕ್ ಮೇಲೆ ನಿಗಾ ಇಟ್ಟಿದ್ದೀರಿ? ನಿಮ್ಮ ಇಲಾಖೆಯಲ್ಲಿ ಎಷ್ಟು ಅಧಿಕಾರಿಗಳಿದ್ದಾರೆ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಮತ್ತೆ ನ್ಯಾಯಬೆಲೆ ಅಂಗಡಿಗಳಲ್ಲಿ ಗುಣಮಟ್ಟದ ಆಹಾರ ಧಾನ್ಯಗಳು ಸರಬರಾಜು ಆಗುತ್ತಿಲ್ಲವೆಂದು ನಾನು ಕೇಳಿದ್ದೇನೆ. ಈಗಲೂ ಕೂಡ ನಾನು ಗೋಧಿ. ಅಕ್ಕಿಗಳೆಲ್ಲವನ್ನು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಒಬ್ಬ ಲೇಮ್ಯಾನ್ ಹೋಗಿ ಅಕ್ಕ. ಗೋಧಿಯನ್ನು ಕೈಯಲ್ಲಿ ಹಿಡಿದುಕೊಂಡು ನೋಡಿದಾಗ ಇದೆಲ್ಲಾ ಕಲಬೆರಕೆ ಎಂದು ಗೊತ್ತಾಗುತ್ತದೆ. ಇದು ಕೇವಲ ಒಬ್ಬ ಲೇಮ್ಯಾನ್‌ಗೆ ಗೊತ್ತಾಗುತ್ತದೆಂದರೆ ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆಂಬುದನ್ನು ತಾವೇ ಹೇಳಬೇಕು? ಇವತ್ತಿನ ದಿವಸ ಯಾವುದೇ ರೇಷನ್ ಕಾರ್ಡ್ ಅಂಗಡಿಯಲ್ಲಿ ಒಳ್ಳೆಯ ಅಕ್ಕಿ. ಗೋಧಿ ಸಿಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ. ನಿಮ್ಮ ಇಲಾಖೆಯ ಅಧಿಕಾರಿಗಳು ನಿದ್ದೆ ಮಾಡುತ್ತಿದ್ದಾರೆಯೇ? ನೀವೊಬ್ಬರು ಯುವಕ ಸಚಿವರಾಗಿದ್ದೀರಿ. ಆದ್ದರಿಂದ. ಬಹಳ ಚೆನ್ನಾಗಿ ಕೆಲಸ ಮಾಡಿ ಜನರಿಗೆ ಒಳ್ಳೆಯ ಅಕ್ಕಿ ಗೋಧಿ. ಸಿಗುವಂತೆ ಮಾಡಿ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ. ಈಗಾಗಲೇ 42 ಸಾವಿರ ಕೇಸ್‌ಗಳನ್ನು ಹಾಕಿ ಸಾಕಷ್ಟು ದಂಡವನ್ನು ಸಹ ಕಟ್ಟಿಸತಕ್ಕಂಥ ಕೆಲಸವನ್ನು ಮಾಡಲಾಗಿದೆ. ಈ ಸಾರಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ವಿಶೇಷವಾದಂಥ ಗಮನವನ್ನು ಹರಿಸಿ ನಮ್ಮ ಇಲಾಖೆಯನ್ನು ಸ್ಟ್ರೆಂಥನ್ ಮಾಡಲಾಗುತ್ತದೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಮುಂದೆ ಈ ಇಲಾಖೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಜ್ಜುಗೊಳಿಸಿದ್ದಾರೆ. ಮತ್ತೆ ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಮಾನ್ಯ ಮುಖ್ಯ ಮಂತ್ರಿಗಳು ಒದಗಿಸುತ್ತಿದ್ದಾರೆ. ಮತ್ತೆ ನ್ಯಾಯ ಬೆಲೆ ಅಂಗಡಿಯಲ್ಲಿ

ನೀಡುತ್ತಿರುವ ಆಹಾರ ಪದಾರ್ಥಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನ್ಯಾಯಬೆಲೆ ಅಂಗಡಿಗಳಿಗೆ F.C.I. ಗೋಡೌನ್ ನಿಂದ ಆಹಾರ ಪದಾರ್ಥಗಳನ್ನು ಕೊಡುತ್ತಾರೆ. F.A.Q (Fair average quality) ಎಂದು ಕೇಂದ್ರ ಸರ್ಕಾರ ಒಂದು ನಾರ್ಮ್ಸ್‌ನ್ನು ನಿಗದಿ ಮಾಡಿದ್ದಾರೆ. ಅದರ ಪ್ರಕಾರ ಇರತಕ್ಕಂಥ ಆಹಾರವನ್ನು ನಾವು ಸರಬರಾಜು ಮಾಡುತ್ತೇವೆ. ತಾವು ಕಲಬೆರೆಕೆ ಆಗುತ್ತದೆಂದು ತಾವು ಹೇಳಿದ್ದೀರಿ. ಆದರೆ. ಕಲಬೆರಕೆಗಿಂತ ಅಲ್ಲಿ ಸಾಕಷ್ಟು ಆಹಾರ ಜನರಿಗೆ ಮುಟ್ಟಿತ್ತಿಲ್ಲವೆಂಬ ದೂರು ಇದೆ. ನಾನು ಕೂಡ ಹೋಗಿ ನೋಡಿದ್ದೇನೆ. ಮತ್ತೆ ನಮ್ಮ ಅಧಿಕಾರಿಗಳು ಸಾಕಷ್ಟು ಪತ್ತೆ ಕೂಡ ಹಚ್ಚಿದ್ದಾರೆ. ಕಲಬೆರಕೆ ಆಗುವುದಕ್ಕಿಂತ ಕೊಡತಕ್ಕಂಥದ್ದರಲ್ಲಿಯೇ ವ್ಯತ್ಯಾಸವಾಗಿದೆ. ಏಕೆಂದರೆ. ರೇಷನ್ ಕೊಡುವುದೇ ಸ್ವಲ್ಪವಾಗಿರುವುದರಿಂದ ಅದರಲ್ಲಿ ಕಲಬೆರಕೆ ಮಾಡುವುದಕ್ಕೆ ಸಮಯವೇ ಇರುವುದಿಲ್ಲ. ರೇಷನ್ ಕೊಟ್ಟ ಕೂಡಲೇ ಜನರು ತೆಗೆದುಕೊಂಡು ಹೋಗುತ್ತಾರೆ. ರೇಷನ್ ಕೊಡುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನಾವು ನೀವು ಮತ್ತು ಅಧಿಕಾರಿಗಳು ಸಹ ನೋಡುತ್ತಿದ್ದಾರೆ. ಮುಂದೆ ಈ ರೀತಿಯಾಗತಕ್ಕಂಥ ಅನ್ಯಾಯಗಳನ್ನು ಸರಿಪಡಿಸುತ್ತೇವೆ.

ಶ್ರೀ ಆರ್.ರೋಷನ್ ಬೇಗ್ :– Food Corporation of Indiaಗೆ ತಾವೇಕೆ ಬ್ಲೇಮ್ ಮಾಡುತ್ತಿದ್ದೀರಿ? ಅವರು ಕೊಡತಕ್ಕಂಥ ಅಕ್ಕಿ. ಗೋಧಿ ಬೇಡವೆಂದು ತಾವು ತಿರಸ್ಕಾರ ಮಾಡಿ. Food Corporation of Indiaದವರು ಕೊಡತಕ್ಕಂಥ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಬಂದು ನಾನು ನ್ಯಾಯಬೆಲೆ ಅಂಗಡಿಯಲ್ಲಿ ಕೊಡುತ್ತೇವೆ. ಅದು ಆ ರೀತಿಯಾಗಿರುತ್ತದೆ. ನಾವೇನು ಮಾಡೋಣವೆಂದು ತಾವು ಹೇಳಿದರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಯವರು ಕೇಂದ್ರ ಸರ್ಕಾರದ ಮುಂದೆ ಹೋಗಿ ಸತ್ಯಾಗ್ರಹ ಮಾಡೋಣವೆಂದು ಹೇಳುತ್ತಾರೆ. ಆದ್ದರಿಂದ. Food Corporation of India ಮುಂದೆ ನೀವು ಹೋಗಿ ಸತ್ಯಾಗ್ರಹ ಮಾಡಿ.

ಶ್ರೀ ಹೆಚ್. ಹಾಲಪ್ಪ :– ನಾನು ಆ ರೀತಿಯಾಗಿ ಹೇಳಲಿಲ್ಲ. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಅವರು ಕೊಡತಕ್ಕಂಥದ್ದನ್ನು ನಾವು ಸರಬರಾಜು ಮಾಡುತ್ತಿದ್ದೇವೆಂದು ಹೇಳಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಅವರದೇ ಆದಂಥ ನಾರ್ಮ್ಸ್ ನಿಗದಿ ಮಾಡಿಕೊಂಡು ಆ ನಾರ್ಮ್ಸ್ ಪ್ರಕಾರವೇ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದಾರೆ. ಅದರಲ್ಲಿ ಕಳಪೆ ಬಂದರೆ ಅವರೇ ಕೊಡುವುದಿಲ್ಲ. ಆದ್ದರಿಂದ. ಗುಣಮಟ್ಟಕ್ಕಿಂತ ಅಲ್ಲಿ ಅವ್ಯವಹಾರಗಳು ಹೆಚ್ಚು ಕಡಿಮೆ ಆಗುತ್ತದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ. ಕಲಬೆರಕೆ ಆಗುತ್ತದೆಂಬುದನ್ನು ತಾವು ಹೇಗೆ ಹೇಳಿದರೋ ಗೊತ್ತಿಲ್ಲ.

ಶ್ರೀ ಆರ್. ರೋಷನ್ ಬೇಗ್ :– ರೇಷನ್ ಅಂಗಡಿಯಲ್ಲಿರತಕ್ಕಂಥ ಅಕ್ಕಿಯನ್ನು ನಾನು ನಿಮ್ಮ ಮನೆಗೆ ಕಳುಹಿಸಿ ಕೊಡುತ್ತೇನೆ. ತಾವು ಇವತ್ತು ಅಡಿಗೆ ಮಾಡಿಸುತ್ತೀರಾ.

ಶ್ರೀ ಹೆಚ್. ಹಾಲಪ್ಪ :– ತಾವೇಕೆ ಇಷ್ಟೊಂದು ರೋಷವಾಗುತ್ತೀರಿ? ತಾವು ಹಿರಿಯ ಸದಸ್ಯರು ತಾವು ಏನು ಸಲಹೆ ಕೊಡುತ್ತೀರೋ ಅದನ್ನು ನಾವು ಅನುಷ್ಠಾನ ಮಾಡುತ್ತೇವೆ.

ಶ್ರೀ ಆರ್.ರೋಷನ್ ಬೇಗ್ :– ಹಾಗಾದರೆ. ನಾನು ಸುಳ್ಳು ಹೇಳುತ್ತಿದ್ದೇನೆಂದು ಅರ್ಥವೇ? ನ್ಯಾಯ ಬೆಲೆ ಅಂಗಡಿಯಲ್ಲಿ ಕಲಬೆರಕೆ ಆಹಾರ ಪದಾರ್ಥಗಳು ಸರಬರಾಜು ಆಗುತ್ತಿದೆ ಎಂದು ಈ ಸದನದಲ್ಲಿ ನಾನು ಹೇಳತಕ್ಕಂಥದ್ದು ಸುಳ್ಳು ಮಾಹಿತಿಯೇ?

ಶ್ರೀ ಹೆಚ್. ಹಾಲಪ್ಪ :– ಸುಳ್ಳೆಂದು ನಾನು ಹೇಳುತ್ತಿಲ್ಲ.